# ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಬೇಲೂರು.

**ಸಿ. ಸಿ. ನಂ.:357/2019**

| | | |
|---|---|---|
| ಹೆಸರು | ಆರ್ ಚಂದ್ರಪ್ಪ | **ದಿ:26-10-2023** |
| ತಂದೆ ಹೆಸರು | ಲೇ. ರೇವಣ್ಣ | |
| ವಯಸ್ಸು | 64 ವರ್ಷ | **ಪಿಡಬ್ಲ್ಯೂ: 2** |
| ಉದ್ಯೋಗ | ನಿವೃತ್ತಿ | **ಸಿಡಬ್ಲ್ಯೂ: 4** |
| ವಾಸ | ಚಿಕ್ಕಮಗಳೂರು | **ವಿಧಿ ಬದ್ದವಾಗಿ ಪ್ರಮಾಣೀಕರಿಸಲಾಯ್ತು** |

**ಮುಖ್ಯ ವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:**

ದಿ:**25-02-2019** ರಿಂದ **31-05-2019** ರವರೆಗೆ ಬೇಲೂರು ವಲಯದ ಅಬಕಾರಿ ನೀರಿಕ್ಷಕರ ಕಚೇರಿಯಲ್ಲಿ ಅಬಕಾರಿ ಉಪ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ:**16-03-2019** ರಂದು ಸುಮಾರು ಮ:**12.45** ಗಂಟೆ ಸಮಯದಲ್ಲಿ ನಾನು ನಮ್ಮ ಸಿಬ್ಬಂದಿಯೊಂದಿಗೆ ಕೆಎ-**13**-ಜಿ-**645** ಟಾಟಾ ಸುಮೋ ವಾಹನದಲ್ಲಿ **2019** ನೇ ಸಾಲಿನ ಲೋಕ ಸಭಾ ಚುನಾವಣೆ ಪ್ರಯುಕ್ತ ಬೇಲೂರು ಹಳೇಬೀಡು ರಸ್ತೆಯಲ್ಲಿ ಗಸ್ತು ಮಾಡುತ್ತಿದ್ದಾಗ ಬಂದ ಮಾಹಿತಿ ಪ್ರಕಾರ ಹಳೇಬೀಡು ಗ್ರಾಮದ ವಾಸಿ ಮಧು ಬಿನ್ ಲೇ. ಹೂವೇಗೌಡ ಎಂಬುವವರಿಗೆ ಸೇರಿದ ಮಲೆನಾಡು ಹೋಟೆಲ್ ನಲ್ಲಿ ಅಕ್ರಮವಾಗಿ ಮದ್ಯದ ದಸ್ತಾನು ಮಾಡಿರುತ್ತಾರೆ. ನಂತರ ನಾವು ಹಳೇಬೀಡು ಮುಖ್ಯ ರಸ್ತೆಯ ಬದಿಯಲ್ಲಿ ಮಾತನಾಡುತ್ತ ನಿಂತಿದ್ದ ಚಾಸಾ-**1** ಮತ್ತು **2** ರವರನ್ನು ಬರಮಾಡಿಕೊಂಡು ಅವರಿಗೆ ಬಂದ ಮಾಹಿತಿ ತಿಳಿಸಿ ದಾಳಿ ಸಮಯದಲ್ಲಿ ಪಂಚರಾಗಿ ಸಹಕರಿಸಲು ಕೋರಿ ಆ ಮೇರೆಗೆ ಅವರಿಗೆ ಲಿಖಿತ ನೋಟೀಸು ನೀಡಿ ಅವರು ಅದಕ್ಕೆ ಒಪ್ಪಿ ನಮ್ಮೊಂದಿಗೆ ಸಹಕರಿಸಿ ನಂತರ ಮಾಹಿತಿ ಬಂದ ಸ್ಥಳಕ್ಕೆ ಹೋಗಿ ನೋಡಲಾಗಿ ದೂರದಿಂದ ಸಮವಸ್ತ್ರದಲ್ಲಿ ಇದ್ದ ನಮ್ಮನ್ನು ಒಬ್ಬ ವ್ಯಕ್ತಿ ನೋಡಿ ಗಾಬರಿಯಿಂದ ಹೋಟೆಲ್ ಹಿಂಭಾಗದಿಂದ ಪಲಾಯನ ಮಾಡಿರುತ್ತಾನೆ. ಆತನನ್ನು ನಮ್ಮ ಸಿಬ್ಬಂದಿಗಳು ಬೆನ್ನತ್ತಿ ಹೋದರು ಆತ ಸಿಗದೆ ಪರಾರಿ ಆಗಿರುತ್ತಾನೆ. ನಂತರ ಪಂಚರೊಂದಿಗೆ ಮಾಹಿತಿ ಬಂದ ಹೋಟೆಲ್ ಬಂದು ನ್ಯಾಯಾಲಯದಿಂದ ಶೋಧನ ವಾರೆಂಟ್ ಪಡೆಯಲು ಸಮಯವಕಾಶ ಇಲ್ಲದ ಕಾರಣ ಪಂಚರಿಗೆ ತಿಳಿಸಿ ಕ ಆ ಕಾಯ್ದೆ ಕಲಂ **54** ರಡಿಯಲ್ಲಿ ಸ್ಥಳದಲ್ಲಿ ಶೋಧನ ಸಮುಚಿತ ಆಧಾರವನ್ನು ತಯಾರಿಸಿ ನಾವುಗಳು ಪರಸ್ಪರ ಅಂಗ ಶೋಧನ ಮಾಡಿಕೊಂಡು ಸದರಿ ಹೋಟೆಲ್ ಮತ್ತು ಮನೆಯನ್ನು ಶೋಧನೆ ಮಾಡಲಾಗಿ ಹೋಟೆಲ್ ನ ಅಡುಗೆ ಕೋಣೆಯ ಒಂದು ಮೂಲೆಯಲ್ಲಿ ಒಂದು ಪ್ಲಾಸ್ಟಿಕ್

ಚೀಲ ಇರುವುದು ಕಂಡು ಬಂತು. ಸದರಿ ಚೀಲವನ್ನು ಪರಿಶೀಲಿಸಿದಾಗ ಅದರಲ್ಲಿ ಮದ್ಯದ ಪ್ಯಾಕೆಟ್ ಗಳು ಇರುವುದು ಕಂಡು ಬಂತು. ಅವುಗಳನ್ನು ತೆಗೆದು ಪರಿಶೀಲಿಸಿ ನೋಡಲಾಗಿ ಅವುಗಳು **90** ಎಂ ಎಲ್ ನ **210** ರಾಜಾ ವಿಸ್ಕಿಯ ಟೆಟ್ರಾ ಪ್ಯಾಕ್ ಹಾಗೂ **90** ಎಂ ಎಲ್ ನ **28** ಎಂಸಿ ರಮ್ ನ ಟೆಟ್ರಾ ಪ್ಯಾಕ್ ಮತ್ತು **180** ಎಂ ಎಲ್ ನ **12** **8** ಪಿಎಂ ವಿಸ್ಕಿಯ ಟೆಟ್ರಾ ಪ್ಯಾಕ್ ಗಳು ಇರುವುದು ಕಂಡು ಬಂತು. ಸದರಿ ದಾಸ್ತಾನು ಹೊಂದಿರುವುದು ಕ ಅ ಕಾಯ್ದೆ ಪ್ರಕಾರ ಅಪರಾಧ ಎಂದು ತಿಳಿಸಿ ಅವುಗಳನ್ನು ನಮ್ಮ ವಶಕ್ಕೆ ಪಡೆದು ಸದರಿ ಮದ್ಯದ ದಾಸ್ತಾನಿನ ಒಟ್ಟು ಅಳತೆ **23.580** ಲೀಟರ್ ಇರುವುದು ಪತ್ತೆಯಾಗಿರುತ್ತದೆ. ದೊರೆತ ಮದ್ಯಗಳ ಪೈಕಿ ರಾಸಾಯಿನಿಕ ಪರೀಕ್ಷೆಗಾಗಿ **90** ಎಂ ಎಲ್ ನ **15** ರಾಜಾ ವಿಸ್ಕಿಯ ಟೆಟ್ರಾ ಪ್ಯಾಕ್ , **90** ಎಂ ಎಲ್ ನ **5** ಎಂಸಿ ರಮ್ ನ ಟೆಟ್ರಾ ಪ್ಯಾಕ್ , **180** ಎಂ ಎಲ್ ನ **5** **8** ಪಿಎಂ ವಿಸ್ಕಿಯ ಟೆಟ್ರಾ ಪ್ಯಾಕ್ ಗಳನ್ನು ತೆಗೆದು ಅವುಗಳನ್ನು ಬಿಳಿ ಚೀಲದಲ್ಲಿ ಸುತ್ತಿ ಮತ್ತು ದಾರದಲ್ಲಿ ಸುತ್ತಿ ಅವುಗಳಿಗೆ ಇಲಾಖಾ ಸೀಲು **336** ಕ್ರಮ ಜರುಗಿಸಲಾಯಿತು. ಓಡಿ ಹೋದ ಆರೋಪಿಯ ಹೆಸರು ವಿಳಾಸ ಕೇಳಲಾಗಿ ಮಧು ಬಿನ್ ಲೇ. ಹೂವೇಗೌಡ, **45** ವರ್ಷ, ಹಳೇಬೀಡು ಗ್ರಾಮ ಎಂದು ತಿಳಿಸಿದರು. ನಂತರ ಮಾದರಿ ಸೀಲಿನ ನಕಲನ್ನು ತಯಾರಿಸಿ ಅವುಗಳಿಗೆ ಪಂಚರ ಸಹಿ ಪಡೆದು ಮಾದರಿಗೆ ತೆಗೆದ ಸ್ವತ್ತುಗಳಿಗೆ ಮತ್ತು ಚೀಲಕ್ಕೆ ಅಂಟಿಸಲಾಯಿತು. ಕೃತ್ಯ ಸ್ಥಳದ ಚೆಕ್ಕು ಬಂದಿ ನೋಡಲಾಗಿ ಪೂರ್ವಕ್ಕೆ ದಯಾನಂದ ರವರ ಸ್ವತ್ತು, ಪಶ್ಚಿಮಕ್ಕೆ ಚಂದ್ರಕಲಾರವರಿಗೆ ಸೇರಿದ ಸ್ವತ್ತು. ಉತ್ತರಕ್ಕೆ ಕೃತ್ಯ ಸ್ಥಳದ ನಿವೇಶನ, ದಕ್ಷಿಣಕ್ಕೆ ಚೆನ್ನಗೌಡರ ಸ್ವತ್ತು. ನಂತರ ದೊರೆತ ಸ್ವತ್ತುಗಳನ್ನು ಮದ್ಯಾಹ್ನ **1-30** ರಿಂದ **2-30** ಗಂಟೆಯವರೆಗೆ ನಿಪಿ-**1** ರಂತೆ ಮಹಜರ್ ಮಾಡಿ ಅಮಾನತ್ತುಪಡಿಸಿಕೊಂಡೆವು.

ಸಾಕ್ಷಿಯು ನಿಪಿ-**1** ರ ಮಹಜರ್ ನ್ನು ಗುರುತಿಸಿದ್ದು ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-**1** ಬಿ ಎಂದು ಗುರುತಿಸಲಾಯಿತು. ನಂತರ ಕಚೇರಿಗೆ ಬಂದು ಪ್ರವವ ವರದಿಯನ್ನು ಹಾಗೂ ಸ್ವತ್ತಿನ ಪಟ್ಟಿ ತಯಾರಿಸಿ ಮಾನ್ಯ ಘನ ನ್ಯಾಯಾಲಯಕ್ಕೆ ಚಾಸಾ-**3** ರವರೊಂದಿಗೆ ನಿವೇದಿಸಿಕೊಳ್ಳಲಾಯಿತು. ರಾಸಾಯಿನಿಕ ಪರೀಕ್ಷೆಗೆ ತೆಗೆದ ಮಾದರಿಯನ್ನು ಬೆಂಗಳೂರಿನ ಪ್ರಯೋಗಲಾಯಕ್ಕೆ ದಿಃ**02-05-2019** ರಂದು ಚಾಸಾ-**3** ರವರೊಂದಿಗೆ ಕಳುಹಿಸಿಕೊಡಲಾಯಿತು. ಸಾಕ್ಷಿಯು ನಿಪಿ-**2** ರ ಮಾದರಿ ಸೀಲಿನ ನಕಲನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-**2** ಬಿ ಎಂದು ಗುರುತಿಸಲಾಯಿತು. ಪ್ರವವ ವರದಿಯನ್ನು ಗುರುತಿಸಿದ್ದು ಅದನ್ನು ನಿಪಿ-**3** ಎಂದು ಸಾಕ್ಷಿಯ ಸಹಿಯನ್ನು ನಿಪಿ-**3** ಎ ಎಂದು

ಗುರುತಿಸಲಾಯಿತು. ಶೋಧನ ಸಮುಚಿತ ಆಧಾರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-4 ಎಂದು ಸಾಕ್ಷಿಯ ಸಹಿಯನ್ನು ನಿಪಿ-4 ಎ ಎಂದು ಗುರುತಿಸಲಾಯಿತು. ಪ್ರಯೋಗಲಾಯಕ್ಕೆ ಕಳುಹಿಸಿದ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-5 ಎಂದು ಸಾಕ್ಷಿಯ ಸಹಿಯನ್ನು ನಿಪಿ-5 ಎ ಎಂದು ಗುರುತಿಸಲಾಯಿತು. ನಂತರ ಹಳೇಬೀಡು ಗ್ರಾಮ ಪಂಚಾಯಿತಿಗೆ ಸ್ವತ್ತಿಗೆ ಸಂಬಂಧಿಸಿದ ದಾಖಲೆಗಳನ್ನು ಕೋರಿ ಪತ್ರವನ್ನು ಬರೆದಿದ್ದು ಸದರಿ ಪತ್ರವನ್ನು ನಿಪಿ-6 ಎಂದು ಸಾಕ್ಷಿಯ ಸಹಿಯನ್ನು ನಿಪಿ-6 ಎ ಎಂದು ಗುರುತಿಸಲಾಯಿತು. ನಂತರ ಕಡತವನ್ನು ಮುಂದಿನ ಕ್ರಮಕ್ಕಾಗಿ ಅಬಕಾರಿ ನಿರೀಕ್ಷಕರಾದ ಶ್ರೀಮತಿ ಸ್ವರ್ಣಶ್ರೀ ರವರಿಗೆ ವಹಿಸಿಕೊಡಲಾಯಿತು.

ಸಾಕ್ಷಿಯು ಈಗ ನ್ಯಾಯಾಲಯದ ಮುಂದಿರುವ 90 ಎಂ ಎಲ್ ನ 15 ರಾಜಾ ವಿಸ್ಕಿಯ ಟೆಟ್ರಾ ಪ್ಯಾಕ್ , 90 ಎಂ ಎಲ್ ನ 5 ಎಂಸಿ ರಮ್ ನ ಟೆಟ್ರಾ ಪ್ಯಾಕ್ , 180 ಎಂ ಎಲ್ ನ 5 8 ಪಿಎಂ ವಿಸ್ಕಿಯ ಟೆಟ್ರಾ ಪ್ಯಾಕ್ ಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ಮುಮಾ-1 ರಿಂದ 3 ಎಂದು ಗುರುತಿಸಲಾಯಿತು. ದಾಳಿ ಸಮಯದಲ್ಲಿ ನಮ್ಮನ್ನು ನೋಡಿ ಓಡಿ ಹೋದ ವ್ಯಕ್ತಿಯನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ವ್ಯಕ್ತಿ ಈ ದಿನ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿ ಎಂದು ಸಾಕ್ಷಿ ಗುರುತಿಸುತ್ತಾರೆ.

## ಪಾಟೀ ಸವಾಲುಃ ಆರೋಪಿ ಪರ ಶ್ರೀ ಸಿ ಎಂ ಪಿ ರವರಿಂದಃ

ನಿಪಿ-1 ರ ಮಹಜರ್ ನ್ನು ಅಬಕಾರಿ ರಕ್ಷಕರಾದ ಮಧು ಎಂಬುವವರು ಬರೆದಿರುತ್ತಾರೆ. ನಿಪಿ-1 ನ್ನು ಬರೆದ ಬಗ್ಗೆ ಸದರಿ ಮಧು ರವರಿಂದ ಸಹಿ ಪಡೆದಿರುವುದಿಲ್ಲ. ನಿಪಿ-1 ನ್ನು ಬರೆಯುವಂತೆ ನಾನೇ ಸೂಚನೆ ನೀಡಿರುತ್ತೇನೆ. ನಾನು ಹಳೇಬೀಡು ಗಡಿಯಲ್ಲಿ ಗಸ್ತಿನಲ್ಲಿ ಇರುವಾಗ ಮಾಹಿತಿ ಬಂದಿರುತ್ತದೆ. ಈ ವಿಷಯವನ್ನು ನಿಪಿ-1 ರಲ್ಲಿ ಬರೆದಿರುವುದಿಲ್ಲ. ಮಾಹಿತಿ ಬಂದಾಗ ಸಮಯ ಮಃ12.45 ಆಗಿತ್ತು. ಪಂಚರನ್ನು ಹಳೇಬೀಡಿನ ಮುಖ್ಯ ರಸ್ತೆಯಲ್ಲಿ ಮಾತನಾಡುತ್ತ ನಿಂತಿದ್ದಾಗ ನೇಮಕ ಮಾಡಿಕೊಂಡಿರುತ್ತೇವೆ. ಪಂಚರನ್ನು ನೇಮಕ ಮಾಡಿಕೊಂಡಾಗ ಸಮಯ ಸುಮಾರು 12.45 ರಿಂದ 1.00 ಗಂಟೆ ಆಗಿತ್ತು. ಆರೋಪಿಯ ಹೋಟೆಲ್ ಬಳಿ 5 ನಿಮಿಷದಲ್ಲಿ ಹೋಗಿರುತ್ತೇವೆ. ಆರೋಪಿಯನ್ನು ಸುಮಾರು 25 ಅಡಿ ದೂರದಿಂದ ನೋಡಿದ್ದು ಆತ ಓಡಿ ಹೋಗಿರುತ್ತಾನೆ. ಆರೋಪಿ ಮನೆಯ ಮತ್ತು ಹೋಟೆಲ್ ನ ಚಹರೆ ಈಗ ನೆನಪಿಲ್ಲ. ಸದರಿ ಹೋಟೆಲು ಆರೋಪಿಗೆ

ಸೇರಿದ್ದು ಎಂದು ವಿಚಾರಿಸಿ ತಿಳಿದುಕೊಂಡಿರುತ್ತೇವೆ. ಆರೋಪಿ ಹೋಟೆಲ್ ನಡೆಸಲು ಪರವಾನಗಿ ಪಡೆದಿದ್ದಾರೋ ಇಲ್ಲವೋ ಎಂದು ವಿಚಾರಿಸಿರುವುದಿಲ್ಲ. ಹೋಟೆಲ್ ನ ಯಾವ ಭಾಗದಲ್ಲಿ ಅಡುಗೆ ಮನೆ ಇತ್ತು ಎಂದು ಈಗ ನೆನಪಿಲ್ಲ. ಪ್ಲಾಸ್ಟಿಕ್ ಚೀಲ ಬಿಳಿಯ ಬಣ್ಣದ್ದಾಗಿರುತ್ತದೆ. ಸದರಿ ಚೀಲವನ್ನು ವಶಪಡಿಸಿಕೊಂಡಿರುತ್ತೇವೆ. ಈ ವಿಷಯವನ್ನು ಸ್ವತ್ತು ಪಟ್ಟಿಯಲ್ಲಿ ನಮೂದು ಮಾಡಿರುತ್ತೇವೆ. ಸಾಕ್ಷಿಗೆ ಸ್ವತ್ತು ಪಟ್ಟಿ ತೋರಿಸಲಾಗಿ ಅದರಲ್ಲಿ ಪ್ಲಾಸ್ಟಿಕ್ ಚೀಲ ವಶಪಡಿಸಿಕೊಂಡಿರುವ ಬಗ್ಗೆ ಬರೆದಿರುವುದಿಲ್ಲ ಎಂದು ನುಡಿಯುತ್ತಾರೆ. ದಾಸ್ತಾನು ಪಟ್ಟಿಯಲ್ಲಿ **90** ಎಂ ಎಲ್ ನ **20** ಮದ್ಯದ ಟೆಟ್ರಾಪ್ಯಾಕ್ ಗಳು ಎಂದು ಬರೆದಿದೆ. ಸಾಕ್ಷಿಯು ಅದು **210** ಪ್ಯಾಕ್ ಗಳು ಎಂದು ಬರೆಯಬೇಕಿತ್ತು ಎಂದು ನುಡಿಯುತ್ತಾರೆ. ದಾಸ್ತಾನು ಪಟ್ಟಿಯನ್ನು ನಮ್ಮ ಕಚೇರಿಯಲ್ಲಿ ಬರೆದಿರುತ್ತೇವೆ. ಸಾಕ್ಷಿದಾರರ ಸಹಿಯನ್ನು ಠಾಣೆಯಲ್ಲಿ ಪಡೆದಿರುತ್ತೇವೆ.

**2.** ಮಹಜರ್ ನ್ನು ಮಃ**1.30** ರಿಂದ **2.30** ರವರೆಗೆ ಮಾಡಿರುತ್ತೇವೆ. ಮಾದರಿಗೆ ತೆಗೆದು ಉಳಿದ ಸ್ವತ್ತುಗಳನ್ನು ನಮ್ಮ ಇಲಾಖೆಯ ಹಿರಿಯ ಅಧಿಕಾರಿಗಳಿಗೆ ಪತ್ರ ಬರೆದು ಅವರಿಗೆ ಕಳುಹಿಸಿಕೊಟ್ಟಿರುತ್ತೇವೆ. ಮದ್ಯದ ಪ್ಯಾಕೆಟ್ ಗಳ ಮೇಲೆ ಅವು ಯಾವ ಬಾರುಗಳಿಗೆ ಸೇರಿದ್ದು ಎಂದು ಸ್ಟೀಕರ್ ಮತ್ತು ನಂಬರ್ ಗಳನ್ನು ನಮೂದು ಮಾಡಿರುತ್ತಾರೆ ಎಂದರೆ ಸರಿ. ಸದರಿ ನಂಬರ್ ಮತ್ತು ಸ್ಟೀಕರ್ ಗಳ ಮೂಲಕ ಮದ್ಯದ ಪ್ಯಾಕೆಟ್ ಗಳು ಯಾವ ಬಾರಿಗೆ ಸೇರಿದ್ದು ಎಂದು ತಿಳಿದುಕೊಳ್ಳಬಹುದು ಎಂದರೆ ಸರಿ. ಈ ರೀತಿ ಮಾಹಿತಿ ಪಡೆದು ಸಂಬಂಧಪಟ್ಟ ಬಾರ್ ಮಾಲೀಕರ ವಿರುದ್ದ ಕ್ರಮ ತೆಗೆದುಕೊಂಡಿರುವುದಿಲ್ಲ.

**3.** ದಿಃ**16-03-2019** ರಂದು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಮಲೆನಾಡು ಹೋಟೆಲ್ ಮೇಲೆ ಯಾವುದೇ ದಾಳಿ ಮಾಡಿರುವುದಿಲ್ಲ ಮತ್ತು ಯಾವುದೇ ಸ್ವತ್ತನ್ನು ವಶಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗು ಮತ್ತು ಮಲೆನಾಡು ಹೋಟೆಲ್ ಗು ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ಸೇರಿದ ಯಾವುದೇ ಮುಮಾಗಳನ್ನು ವಶಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾವು ನಿಪಿ-**1** ನ್ನು ಇಲಾಖೆಯ ಕಚೇರಿಯಲ್ಲಿ ಬರೆದುಕೊಂಡು ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಯಾವುದೇ ದಾಳಿ ಮಾಡಿರುವುದಿಲ್ಲ ಮತ್ತು ಸದರಿ ಮಲೆನಾಡು ಹೋಟೆಲ್ ಗೆ ಹೋಗದಿದ್ದರು ಮೇಲಾಧಿಕಾರಿಗಳ ಮಾತನ್ನು ಕೇಳಿಕೊಂಡು ಇಲಾಖಾ ಅಂಕಿಅಂಶಗಳಿಗೊಸ್ಕರ ಸುಳ್ಳು

ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.  ಮುಮಾ **-1** ರಿಂದ **3** ಕ್ಕೂ ಮತ್ತು ಆರೋಪಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ. ಹೇ. ಕೇ. ಸರಿ. ಇದೆ

**(ಪ್ರಸನ್ನಕುಮಾರ್ ಸಿ.)**
ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಬೇಲೂರು.